ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 1, March-April 2023, Pp. 181-188
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಕಾಫಿ ತೋಟದ ದುಡಿಮೆಗಾರರ ಬದುಕು: ಅಂದು–ಇಂದು

**ಮಹೇಶ್ ಕೆ. ಹೆಚ್**
ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

***Abstract:***
*ಕಾಫಿ ಬೆಳೆಯು ಒಂದು ವಾಣಿಜ್ಯ ಮತ್ತು ಪಾನೀಯ ಬೆಳೆಯಾಗಿದೆ. ಕಾಫಿ ತೋಟದಲ್ಲಿ ವರ್ಷವಿಡೀ ಕೆಲಸವಿದ್ದು, ತೋಟದ ಎಲ್ಲಾ ಕೆಲಸಗಳು ಕಾರ್ಮಿಕರ ಶ್ರಮದ ಮೇಲೆ ಅವಲಂಬಿತವಾಗಿದೆ. ಬ್ರಿಟಿಷರ ಮಾಲೀಕತ್ವದ ಕಾಫಿ ತೋಟಗಳಲ್ಲಿ ದುಡಿಯುತ್ತಿದ್ದ ಅಂದಿನ ಸಂದರ್ಭದಲ್ಲಿ ಕಾರ್ಮಿಕರ ಬದುಕಿನ ಪರಿಸ್ಥಿತಿ ಹೇಗಿತ್ತು ಬ್ರಿಟಿಷರ ಮಾಲೀಕತ್ವದಲ್ಲದ ನಮ್ಮ ದೇಶದ ಭೂಮಾಲೀಕತ್ವದ ಕಾಫಿ ತೋಟದಲ್ಲಿ ದುಡಿಯುತ್ತಿರುವ ಕಾಫಿ ತೋಟದ ಕಾರ್ಮಿಕರ ಬದುಕಿನ ಪರಿಸ್ಥಿತಿ ಹೇಗಿದೆ ಎಂಬುವುದರ ಬಗ್ಗೆ ಮುಖ್ಯವಾಗಿ ಅರ್ಥಮಾಡಿಕೊಳ್ಳಬೇಕಾಗಿದೆ. ಬ್ರಿಟಿಷರ ಕಾಲದಲ್ಲಿ ಮತ್ತು ಪ್ರಸ್ತುತ ಕಾಫಿ ತೋಟದಲ್ಲಿ ದುಡಿಯುತ್ತಿರುವ ಕಾರ್ಮಿಕರ ಕೂಲಿ, ಸಮಯ, ದುಡಿಮೆಗಾರ ಸಾಮಾಜಿಕ ಮತ್ತು ಆರ್ಥಿಕ ಭದ್ರತೆಗಳು, ಕಾರ್ಮಿಕ ಕಾಯ್ದೆಯ ಸೌಲಭ್ಯಗಳು, ಕಾರ್ಮಿಕರ ವಸತಿಗಳ ಸ್ಥಿತಿಗತಿಗಳನ್ನೊಳಗೊಂಡಂತೆ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ.*

***Keywords:*** *ಕಾಫಿ ತೋಟದ ದುಡಿಮೆಗಾರರು, ವೇತನ ತಾರತಮ್ಯ, ಕಾರ್ಮಿಕರ ವಲಸೆ, ಕಾರ್ಮಿಕರ ಸಮಸ್ಯೆಗಳು.*

## ಪೀಠಿಕೆ

ಕಾಫಿ ಬೆಳೆಯು ಒಂದು ವಾಣಿಜ್ಯ ಮತ್ತು ಪಾನೀಯ ಬೆಳೆಯಾಗಿದೆ. ಕಾಫಿ ತೋಟದಲ್ಲಿ ವರ್ಷವಿಡೀ ಕೆಲಸವಿದ್ದು, ತೋಟದ ಎಲ್ಲಾ ಕೆಲಸಗಳು ಕಾರ್ಮಿಕರ ಶ್ರಮದ ಮೇಲೆ ಅವಲಂಬಿತವಾಗಿದೆ. ಕಾರ್ಮಿಕರ ಅಪಾರವಾದ ಶ್ರಮವಿಲ್ಲದಿದ್ದರೆ ಕಾಫಿ ತೋಟದ ಕೆಲಸಗಳು ನಡೆಯಲು ಸಾಧ್ಯವಿಲ್ಲ. ಏಕೆಂದರೆ, ನಮ್ಮ ದಕ್ಷಿಣ ಭಾರತದಲ್ಲಿರುವ ಕಾಫಿ ತೋಟಗಳು ಬ್ರೆಜಿಲ್ ದೇಶದಂತೆ ಸಮತಟ್ಟಾದ ಪ್ರದೇಶವಾಗಿಲ್ಲ. ಯಂತ್ರಗಳಿಗಿಂತ ಅಧಿಕವಾಗಿ ಕಾರ್ಮಿಕರ ಶ್ರಮದಿಂದ ಕೆಲಸ ನಡೆಯುತ್ತದೆ. ದಕ್ಷಿಣ ಭಾರತದ ಪಶ್ಚಿಮ ಘಟ್ಟದ ಬೆಟ್ಟಗುಡ್ಡಗಳಲ್ಲಿ, ಎತ್ತರ ಮತ್ತು ಇಳಿಜಾರಿನ ಪ್ರದೇಶ ಹಾಗೂ ಸ್ವಲ್ಪ ಪ್ರಮಾಣದಲ್ಲಿ ಸಮತಟ್ಟಾದ ಪ್ರದೇಶದಲ್ಲಿ ಕಾಫಿಯನ್ನು ಬೆಳೆಯಲಾಗಿದೆ. ಇಲ್ಲಿನ ಕಾಫಿ ತೋಟಗಳು ಉತ್ತಮವಾಗಿದ್ದು, ಕಾರ್ಮಿಕರ ಶ್ರಮ ಎದ್ದು ಕಾಣುತ್ತದೆ.

ಕಾಫಿ ತೋಟದ ದುಡಿಮೆಗಾರರು ತಮ್ಮ ಮಾಲೀಕರ ಕಾಫಿ ತೋಟದ ಅಭಿವೃದ್ಧಿಗಾಗಿ ತಮ್ಮ ಬದುಕನ್ನೇ ಸವೆಸಿದ್ದಾರೆ. ಬ್ರಿಟಿಷರ ಕಾಲದಿಂದ ಇಲ್ಲಿಯವರೆಗೂ ಕೂಡ ಕಾಫಿ ತೋಟದ ದುಡಿಮೆಗಾರರು ವಿವಿಧ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಾ ಸಂಕಷ್ಟದ ಜೀವನ ನಡೆಸುತ್ತಾ

***Please cite this article as:*** ಮಹೇಶ್ ಕೆ. ಹೆಚ್. (2023). ಕಾಫಿ ತೋಟದ ದುಡಿಮೆಗಾರರ ಬದುಕು: ಅಂದು–ಇಂದು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(1), 181–188.

ಬಂದಿದ್ದಾರೆ. ದಲಿತರು ಆದಿವಾಸಿಗಳು ಮಹಿಳೆಯರು ಹೆಚ್ಚಿನ ಶೋಷಣೆಗೆ ಒಳಗಾದ ಕಾರ್ಮಿಕರಾಗಿದ್ದಾರೆ.

**ಶೋಷಣೆಯ ಬದುಕು**

ಪ್ರಪಂಚದಾದ್ಯಂತ ಒಂದಲ್ಲ ಒಂದು ರೀತಿಯಲ್ಲಿ ಪುರುಷರು ಮಹಿಳೆಯರನ್ನು, ಶ್ರೀಮಂತರು ಬಡವರನ್ನು, ಮೇಲ್ವರ್ಗದವರು ಕೆಳವರ್ಗದವರನ್ನು, ಬಹುಸಂಖ್ಯಾತರು ಅಲ್ಪಸಂಖ್ಯಾತರನ್ನು, ಮಾಲೀಕರು ಕಾರ್ಮಿಕರನ್ನು ಒಂದಲ್ಲ ಒಂದು ರೀತಿಯಲ್ಲಿ ಶೋಷಣೆಗೆ ಒಳಪಡಿಸುತ್ತಾ ಬಂದಿದ್ದಾರೆ. ಕಾಫಿ ತೋಟದ ಭೂಮಾಲೀಕರು ಕೂಡ ಇದಕ್ಕೆ ಹೊರತಲ್ಲ ಇವರು ತಮ್ಮ ತೋಟದಲ್ಲಿ ದುಡಿಯುವ ದುಡಿಮೆಗಾರರನ್ನು ಎಲ್ಲಾ ರೀತಿಯಿಂದಲೂ ಶೋಷಣೆಗೆ ಒಳಪಡಿಸಿದ್ದಾರೆ. ಕಾಫಿ ತೋಟಗಳು ನಿರ್ಮಾಣವಾಗಿರುವ ಇತಿಹಾಸವನ್ನು ಗಮನಿಸಿದರೆ 15ನೇ ಶತಮಾನದಿಂದ ಪೋರ್ಚುಗೀಸರು, ಡಚ್ಚರು, ಫ್ರೆಂಚರು, ಆಂಗ್ಲೀಯರು ತಮ್ಮ ವಸಾಹತುಗಳಲ್ಲಿದ್ದ ನಿವಾಸಿಗಳನ್ನು ಅಥವಾ ಅವರು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲದಿದ್ದರೆ ಬೇರೆ ವಸಾಹತುಗಳ ನಿವಾಸಿಗಳನ್ನು ತೋಟಗಳಲ್ಲಿ ಬಿಟ್ಟಿಯಾಗಿ ದುಡಿಸಿಕೊಂಡ ನಿದರ್ಶನಗಳು ನೂರಾರು ಇವೆ. ಇದಕ್ಕಿಂತ ಹೊಲಸಾದುದೇನೆಂದರೆ, ಮನುಷ್ಯರನ್ನು ದನ ಕರುಗಳಂತೆ ಕೊಳ್ಳುತ್ತಿದ್ದ ಮತ್ತು ಮಾರುತ್ತಿದ್ದ ಅಮಾನುಷ ಪದ್ಧತಿ ಹಾಗೂ ಅವರನ್ನು ಮೃಗಗಳಿಗಿಂತ ಕಡೆಯಾಗಿ ಕಾಣುತ್ತಿದ್ದ ರೀತಿ ಇದ್ದುದನ್ನು ನಾವು ನೋಡಬಹುದಾಗಿದೆ.

ಕಾಫಿ ತೋಟದ ದುಡಿಮೆಗಾರನ್ನು ಮನುಷ್ಯನನ್ನಾಗಿ ಕಾಣದೇ ಅವರ ಮೇಲೆ ದೌರ್ಜನ್ಯ–ದಬ್ಬಾಳಿಕೆಗಳು ನಡೆಯುತ್ತಿದ್ದವು. ಕಾಫಿ ತೋಟದ ಕಾರ್ಮಿಕರು ಹಿಂದೆ ಅನುಭವಿಸಿರುವ ಕಷ್ಟ ಮತ್ತು ಅವರ ದುಡಿಮೆಯೂ ಎಂತಹ ಪರಿಸ್ಥಿತಿಯಲ್ಲಿತ್ತು ಎಂಬುವುದನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಹೆಚ್ಚಿನ ಕಾಫಿ ತೋಟಗಳಲ್ಲಿ ಪಾಳೇಗಾರಿ ಸಂಸ್ಕೃತಿಯೇ ಮುಂದುವರೆದಿತ್ತು. ಕಾರ್ಮಿಕರ ಮೇಲೆ ದಬ್ಬಾಳಿಕೆ, ಅವರ ಕೂಲಿಯಲ್ಲಿ ವಂಚನೆ ಹಾಗೂ ಅವರಿಗೆ ನೀಡುವ ಹೊಡೆತ ಹಿಂಸೆಗಳು ಮೆರೆದಿದ್ದವು. ಇಂಗ್ಲಿಷರು ಭಾರತಕ್ಕೆ ಬಂದಿದ್ದರಿಂದ ಇಲ್ಲಿಯ ಜಮೀನ್ದಾರಿ ವರ್ಗ ಮತ್ತು ಬಂಡವಾಳಶಾಹಿ ವರ್ಗಗಳಿಗೆ ಅನುಕೂಲವಾಗಿದ್ದು ನಿಜ. ಆದರೆ ಕೂಲಿ ಕಾರ್ಮಿಕರು ಮಾತ್ರ ಭಾರತದ ಅನೇಕ ಕಡೆ ಇಲ್ಲದೆ ಬಿಟ್ಟಿ ಕೆಲಸ ಮಾಡಬೇಕಾಗಿ ಬಂತು. ದುಡಿಯುವ ಜನರ ಮೇಲೆ ಶೋಷಣೆ, ದಮನ, ದಬ್ಬಾಳಿಕೆಗಳು ಊಹೆಯನ್ನು ಮೀರಿ ಬೆಳೆದವು. ಕಾಫಿ ತೋಟದ ದುಡಿಮೆಗಾರರು ಕೂಡ ತಮ್ಮ ಮಾಲೀಕರು ನೀಡುತ್ತಿದ್ದ ಎಲ್ಲಾ ರೀತಿಯ ಶೋಷಣೆಗಳನ್ನು ಸಹಿಸಿಕೊಂಡು ತೋಟದಲ್ಲಿ ಅನಿವಾರ್ಯವಾಗಿ ದುಡಿಯಬೇಕಾಗಿತ್ತು. ಏಕೆಂದರೆ, ದುಡಿಮೆಗಾರರಿಗೆ ಬದುಕಲು ದುಡಿಮೆ ಬಿಟ್ಟರೆ ಯಾವ ಆದಾಯವು ಇರಲಿಲ್ಲ. ಕಾಫಿ ತೋಟದ ಕೆಲಸವನ್ನೇ ನಂಬಿಕೊಂಡು ಬದುಕು ಸಾಗಿಸುತ್ತಿದ್ದರು. ಆದ್ದರಿಂದ ಮಾಲೀಕರು ಶೋಷಣೆಯನ್ನು ಅನಿವಾರ್ಯವಾಗಿ ಸಹಿಸಿಕೊಳ್ಳುತ್ತಿದ್ದರು. ಈ ಶೋಷಣೆ ಇಂದಿಗೂ ಕೂಡ ಕಾರ್ಮಿಕರ ಮೇಲೆ ಶೋಷಣೆ ನಡೆಯುತ್ತಿದೆ. ಆದರೆ ಹಿಂದಿನದಕ್ಕಿಂತ ಸ್ವಲ್ಪ ಕಡಿಮೆಯಾಗಿದೆ. ಏಕೆಂದರೆ ದುಡಿಮೆಗೆ ತಕ್ಕ ಪ್ರತಿಫಲ ದೊರೆಯಬೇಕು ಮತ್ತು ಕಾರ್ಮಿಕರನ್ನು ಕೂಡ ಮಾನವೀಯ ದೃಷ್ಟಿಯಿಂದ ನೋಡಬೇಕು ಎಂಬ ಧೋರಣೆಯನ್ನು ಪ್ರಪಂಚದ ಪ್ರಜ್ಞಾವಂತರು ತಾಳಿದರು. ಆದ್ದರಿಂದ ಅಂದಿಗಿಂತ ಇಂದು ಕಾಫಿ ತೋಟದ ದುಡಿಮೆಗಾರರ ಬದುಕಿನ ಸ್ಥಿತಿ ಸ್ವಲ್ಪಮಟ್ಟಿಗೆ ಬದಲಾಗಿದೆ.

**ಗುಲಾಮತನದ ದುಡಿಮೆ**

ಹಿಂದೆ ಕಾಫಿ ತೋಟಗಳಲ್ಲಿ ದುಡಿಯುತ್ತಿದ್ದ ಕಾರ್ಮಿಕರನ್ನು ಗುಲಾಮರನ್ನಾಗಿ ಮಾಡಿಕೊಂಡು ತೋಟದಲ್ಲಿ ದುಡಿಸಿಕೊಳ್ಳುತ್ತಿದ್ದರು. 1888 ರವರೆಗೆ ಲಕ್ಷಾಂತರ ಗುಲಾಮರು ಬ್ರೆಜಿಲಿನ ಕಾಫಿ ತೋಟಗಳಲ್ಲಿ ಕೆಲಸ ಮಾಡುತ್ತಿದ್ದುದ್ದನ್ನು ನಾವು ನೋಡಬಹುದಾಗಿದೆ. ಕಾಫಿ, ಟೀ ಮತ್ತು ರಬ್ಬರ್ ಬೆಳೆಯುತ್ತಿದ್ದ ಬೇರೆ ಕಡೆಗಳಲ್ಲಿಯೂ ಗುಲಾಮರ ದುಡಿತವೇ ಆ ತೋಟಗಳ ಅಭಿವೃದ್ಧಿಗೆ

ಕಾರಣವಾಗಿದೆ. ಹಿಂದೆ ಕಾಫಿ ತೋಟದಲ್ಲಿ ಕಷ್ಟಪಟ್ಟು ದುಡಿಮೆ ಮಾಡುತ್ತಿದ್ದ ದುಡಿಮೆಗಾರರಿಗೆ ದನಗಳಿಗೆ ಒಂದಿಷ್ಟು ಹುಲ್ಲು ಹಾಕಿದಂತೆ ಹಸಿದ ಕಾರ್ಮಿಕರ ಹೊಟ್ಟೆಗೆ ಒಂದಿಷ್ಟು ಹಿಟ್ಟುಹಾಕಿ ದುಡಿಸಿಕೊಳ್ಳಲಾಗಿತ್ತು. ಅನೇಕ ರಾಷ್ಟ್ರಗಳ ಹಿರಿಮೆಗೆ ಕಾಫಿ ತೋಟದ ದುಡಿಮೆಗಾರರ ಗುಲಾಮತನದ ದುಡಿತವೇ ಕಾರಣವಾಗಿದೆ.  ಹಿಂದೆ ಗುಲಾಮತನದ ಜೊತೆಗೆ ಜೀತ, ಬಿಟ್ಟಿ ಚಾಕರಿ ಮಾಡಿ ತಮ್ಮ ಬದುಕನ್ನು ನಡೆಸಿರುವುದು ಇತಿಹಾಸದ ಪುಟಗಳಲ್ಲಿ ದಾಖಲಾಗಿರುವುದನ್ನು ಕಾಣಬಹುದಾಗಿದೆ. ಇಂದು ಕಾಫಿ ತೋಟದಲ್ಲಿ ದುಡಿಯುತ್ತಿರುವ ದುಡಿಮೆಗಾರರು ಹಿಂದಿನಂತೆ ಗುಲಾಮತನದಿಂದ ಭೂಮಾಲೀಕರ ತೋಟದಲ್ಲಿ ದುಡಿಯುತ್ತಿರುವುದು, ಜೀತ ಪದ್ಧತಿ ಮಾಡುತ್ತಿರುವುದು ಮತ್ತು ಬಿಟ್ಟಿ ದುಡಿಮೆ ಮಾಡುತ್ತಿರುವುದು ಕಣ್ಮರೆಯಾಗಿದೆ. ಆದರೆ, ಕಡಿಮೆ ಕೂಲಿಗೆ ಧೀರ್ಘಾವಧಿ ದುಡಿಮೆ ಮಾಡುತ್ತಿರುವುದು ಮಾತ್ರ ನಿಂತಿಲ್ಲ.

**ವಸತಿ ಮತ್ತು ಮೂಲಭೂತ ಸೌಕರ್ಯಗಳ ಕೊರತೆ**

ಹಿಂದೆ ಪ್ಲಾಂಟರ್‌ಗಳು ತಮ್ಮ ಇಚ್ಛೆಗೆ ಅನುಗುಣವಾಗಿ ಕಾರ್ಮಿಕರಿಂದ ಕೆಲಸ ಮಾಡಿಸಿಕೊಳ್ಳಲು ತಮ್ಮದೆ ಎಸ್ಟೇಟಿನ ಸಮೀಪದಲ್ಲಿ ಕಾಫಿ ತೋಟದಲ್ಲಿ ದುಡಿಯುವ ಕಾರ್ಮಿಕರಿಗೆ ಗುಡಿಸಲುಗಳನ್ನು (ಲೈನ್‌ಮನೆ) ಒದಗಿಸಿ ಕೊಡುತ್ತಿದ್ದರು. ಈ ವ್ಯವಸ್ಥೆ ದೊಡ್ಡ ದೊಡ್ಡ ಕಾಫಿ ಎಸ್ಟೇಟ್‌ನಲ್ಲಿ ಇತ್ತು. ಇಲ್ಲಿ ನೂರಾರು ಕಾರ್ಮಿಕರಿಗೆ ವಸತಿ ವ್ಯವಸ್ಥೆಯನ್ನು ಕಲ್ಪಿಸಿಕೊಡಲಾಗಿತ್ತು. ಆದರೆ ಹಿಂದೆ ಕಾರ್ಮಿಕರು ವಾಸ ಮಾಡುವ ವಸತಿ ಹೇಗಿತ್ತು ಎಂದರೆ, ದನದ ಕೊಟ್ಟಿಗೆಗಿಂತ ಮತ್ತು ಹಂದಿಗೂಡಿಗಿಂತಲೂ ಕಡೆಯಾಗಿತ್ತು. ಅದೇ ತೋಟದಲ್ಲಿ ಕೆಲಸ ಮಾಡುವ ಮೇಸ್ತ್ರಿ, ಸೂಪರ್‌ವೈಸರ್, ಮ್ಯಾನೇಜರ್‌ಗಳ ಮನೆಗಳು ಎಲ್ಲಾ ಸವಲತ್ತುಗಳನ್ನು ಹೊಂದಿದ್ದು ಸುಸಜ್ಜಿತವಾಗಿತ್ತು. ಇದರಿಂದ ಒಂದೇ ತೋಟದಲ್ಲಿರುವ ಕಾರ್ಮಿಕ ವರ್ಗದ ಸ್ಥಿತಿ ಮತ್ತು ಮಾಲೀಕ ವರ್ಗದ ಸ್ಥಿತಿಯ ಸ್ಪಷ್ಟ ಚಿತ್ರಣ ಕಣ್ಣಿಗೆ ರಾಚುವಂತೆ ಕಾಣುತ್ತಿತ್ತು. ಹಲವಾರು ತೋಟಗಳಲ್ಲಿ ಕಾರ್ಮಿಕರನ್ನು ಕೂಡಿಹಾಕಿ ಹೊಡೆಯಲೆಂದೇ ಕೊಠಡಿಗಳಿದ್ದವು. ಯಾವುದೇ ಸಮರ್ಪಕವಾದ ಮೂಲಭೂತ ಸೌಕರ್ಯಗಳು ಈ ವಸತಿಯಲ್ಲಿ ಇರಲಿಲ್ಲ. ಇದರಲ್ಲಿಯೇ ಕಾರ್ಮಿಕರು ದುಡಿಮೆ ಮಾಡಿಕೊಂಡು ಬದುಕಬೇಕಾಗಿತ್ತು. ಕಾರ್ಮಿಕರು ಹೊಟ್ಟೆ ತುಂಬಾ ಊಟ ಮಾಡದೇ, ಅವರ ಅರೆ ಹೊಟ್ಟೆಯ ದುಡಿಮೆಯಲ್ಲಿಯೇ ಈ ವಸತಿಯಲ್ಲಿ ಬದುಕು ಸಾಗಿಸಬೇಕಾಗಿತ್ತು. ಕಾಫಿ ತೋಟದ ಭೂಮಾಲೀಕರು ಸ್ಥಳೀಯರನ್ನು ಕೆಲಸಕ್ಕೆ ಸೇರಿಸಿಕೊಂಡರೆ ವಿಪರೀತ ಶೋಷಣೆ ಮಾಡಲು ಸಾಧ್ಯವಾಗುವುದಿಲ್ಲ ಎಂಬ ಮುಖ್ಯ ಉದ್ದೇಶದಿಂದ ಬ್ರಿಟಿಷರು ಮತ್ತು ನಂತರದ ಕಾಲಘಟ್ಟಗಳಲ್ಲಿ ತೋಟಗಳನ್ನು ಅಭಿವೃದ್ಧಿಪಡಿಸಲು ಮಾಲೀಕರು ಜನರನ್ನು ಬೇರೆ ಕಡೆಗಳಿಂದ ಕರೆತರುತ್ತಿದ್ದರು. ಬೇರೆಡೆಗಳಿಂದ ಕರೆತಂದ ಕಾರ್ಮಿಕರನ್ನು ತಮ್ಮ ಲೈನ್ ಮನೆಯಲ್ಲಿಟ್ಟುಕೊಂಡು ಜೀತದಾಳುಗಳಂತೆ ಯಾವುದೇ ಕೂಲಿ ನೀಡದೆ ಬದುಕಲು ಅಗತ್ಯವಿರುವಷ್ಟು ಆಹಾರ ನೀಡುತ್ತಾ ಕೆಲಸ ಮಾಡಿಸಿಕೊಳ್ಳುತ್ತಿದ್ದರು. ದುಡಿಮೆಗಾಗಿ ಗುಳೆ ಬಂದವರು ಮಾಲೀಕರ ಎಸ್ಟೇಟ್‌ಗಳಲ್ಲಿ ವಾಸ ಮಾಡುತ್ತಾ ಮೂಲ ಸೌಕರ್ಯಗಳಿಂದ ವಂಚಿತರಾಗಿ ಹೀನಾಯ ಪರಿಸ್ಥಿತಿಯಲ್ಲಿ ಬದುಕು ಸಾಗಿಸುತ್ತಿದ್ದಾರೆ. ಇವರು ಆರೋಗ್ಯ ಸಮಸ್ಯೆ, ಭಾಷೆಯ ಸಮಸ್ಯೆ, ಮಕ್ಕಳ ಶಿಕ್ಷಣದ ಸಮಸ್ಯೆಯ ಜೊತೆಗೆ ಗುರುತಿನ ಪುರಾವೆಗಳಾದ ಮತದಾರ ಗುರುತಿನ ಚೀಟಿ, ಆಧಾರ ಕಾರ್ಡ್ ಮತ್ತು ಪಡಿತರ ಚೀಟಿಗಳನ್ನು ಕೂಡ ಇವರು ಹೊಂದಿರುವುದಿಲ್ಲ.  ಇಂದಿಗೂ ಕೂಡ ಬಹುತೇಕ ಕಾಫಿ ಎಸ್ಟೇಟ್‌ಗಳಲ್ಲಿ ಲೈನ್‌ಮನೆಗಳಿದ್ದು ಕಾರ್ಮಿಕರು ಅಲ್ಲೇ ನೆಲೆಸಿ ದುಡಿಯುತ್ತಿದ್ದಾರೆ. ಕಾಫಿ ತೋಟದ ಭೂಮಾಲೀಕರ ಲೈನ್ ಮನೆಯಲ್ಲಿ ವಾಸ ಮಾಡುತ್ತಿದ್ದ ಕಾರ್ಮಿಕರ ಬದುಕಿನ ಸ್ಥಿತಿ ಒಂದು ಕಡೆಯಾದರೆ, ಮತ್ತೊಂದು ಕಡೆ ಸ್ಥಳೀಯ ಕಾರ್ಮಿಕರು ಹುಲ್ಲಿನ ಗುಡಿಸಲ್ಲಿ

ಮತ್ತು ಹೆಂಚಿನ ಮನೆಯಲ್ಲಿ ವಾಸ ಮಾಡುತ್ತ ಮೂಲಸೌಕರ್ಯಗಳಿಂದ ವಂಚಿತರಾಗಿ ಸಂಕಷ್ಟದಲ್ಲಿ ತಮ್ಮ ಬದುಕನ್ನು ಸಾಗಿಸುತ್ತಿದ್ದಾರೆ. ಹಿಂದೆ ಇದ್ದಂತಹ ವಸತಿ ವ್ಯವಸ್ಥೆ ಕಂಪನಿ ತೋಟಗಳಲ್ಲಿ ಬದಲಾಗಿದಿಯೇ ಹೊರತು ಇನ್ನೂ ಕೆಲವು ತೋಟದಲ್ಲಿ ದನದ ಕೊಟ್ಟಿಗೆಯಂತೆ ಮತ್ತು ಹಂದಿಗೂಡಿನಂತೆ ಇವೆ. ಆದರೆ ಇಂದಿಗೂ ಕೂಡ ತೋಟಗಳಲ್ಲಿ ದುಡಿಯುತ್ತಿರುವ ಕಾರ್ಮಿಕರು ಮೂಲಭೂತ ಸೌಕರ್ಯಗಳಾದ ಮನೆ, ಕುಡಿಯುವ ನೀರು, ವಿದ್ಯುತ್, ರಸ್ತೆ, ಶೌಚಾಲಯ ಹಾಗೂ ನಿವೇಶನ, ಶಿಕ್ಷಣ ಇನ್ನೂ ಮುಂತಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಬಹುತೇಕ ಕಾರ್ಮಿಕರಿಗೆ ಮನೆ ಇಲ್ಲದೆ, ಬಾಡಿಗೆ ಮನೆಯಲ್ಲಿದ್ದುಕೊಂಡು ಜೀವನ ನಡೆಸುತ್ತಿದ್ದಾರೆ. ಕೆಲವರು ಗುಡಿಸಲುಗಳಲ್ಲಿ ಅನಾರೋಗ್ಯಕರವಾದ ವಾತಾವರಣದಲ್ಲಿ ಬದುಕು ನಡೆಸುತ್ತಿದ್ದಾರೆ. ಇವರಿಗೆ ಘನತೆ, ಗೌರವ ಎಂಬುವುದು ಸಿಗುತ್ತಿಲ್ಲ. ಇವರು ಅವಿದ್ಯಾವಂತರಾಗಿದ್ದು, ನಿರಂತರ ಶೋಷಣೆಗೆ ಒಳಗಾಗುತ್ತಿದ್ದಾರೆ.

**ಕೂಲಿ ಮತ್ತು ಕೆಲಸದ ಅವಧಿ**

19ನೇ ಶತಮಾನದಲ್ಲಿ ಬ್ರಿಟಿಷರ ಮಾಲೀಕತ್ವದ ಕಾಫಿ ತೋಟಗಳಲ್ಲಿ ದುಡಿಯುತ್ತಿದ್ದ ದುಡಿಮೆಗಾರರ ಪರಿಸ್ಥಿತಿಯು ತುಂಬಾ ಹೀನಾಯವಾಗಿತ್ತು. ಅವರು ದಿನಕ್ಕೆ 12 ರಿಂದ 16 ಗಂಟೆಗಳ ಕಾಲ ಕೆಲಸ ಮಾಡಬೇಕಾಗಿತ್ತು. ಜೊತೆಗೆ ಅವರಿಗೆ ವಿಶ್ರಾಂತಿಗಾಗಿ ವಾರದ ರಜೆಯು ಇರಲಿಲ್ಲ. ಮಹಿಳೆಯರು ಮತ್ತು ಮಕ್ಕಳು ಸಹ ಪುರುಷರಂತೆಯೇ ದೀರ್ಘಾವಧಿ ಮತ್ತು ಅತ್ಯಂತ ಕಡಿಮೆ ಕೂಲಿಗೆ ದುಡಿಯಬೇಕಾಗಿತ್ತು. ಹಿಂದೆ ಕಾಫಿ ತೋಟದಲ್ಲಿ ದುಡಿಯುತ್ತಿದ್ದ ಕಾರ್ಮಿಕರಿಗೆ ಪುರುಷ ಕಾರ್ಮಿಕರಿಗೆ 5 ಆಣೆ ಮತ್ತು ಮಹಿಳಾ ಕಾರ್ಮಿಕರಿಗೆ ಒಂದುವರೆ ಆಣೆ ಕೂಲಿ ನೀಡಲಾಗುತ್ತಿತ್ತು. ಈ ಕೂಲಿಯಲ್ಲಿಯೇ ಕಾರ್ಮಿಕರು ತಮ್ಮ ಬದುಕನ್ನು ಸಾಗಿಸಬೇಕಾಗಿತ್ತು.

1850ರ ನಂತರ ಅಸ್ಸಾಂ, ಬಂಗಾಳ, ದಕ್ಷಿಣ ಭಾರತ ಮತ್ತು ಹಿಮಾಚಲ ಪ್ರದೇಶದ ಬೆಟ್ಟಗಳಲ್ಲಿ ಟೀ ಉದ್ಯಮ ಅಭಿವೃದ್ಧಿಗೊಂಡಿತು. ಇದೇ ಸಮಯದಲ್ಲಿ ದಕ್ಷಿಣ ಭಾರತದಲ್ಲಿ ಕಾಫಿ ತೋಟಗಳೂ ಅಭಿವೃದ್ಧಿಗೊಂಡವು. ಈ ಉದ್ಯಮಗಳಲ್ಲಿ ಕೆಲಸ ಮಾಡುತ್ತಿದ್ದ ಬಹುತೇಕ ಕೆಲಸಗಾರರು ಕಡಿಮೆ ವೇತನದವರಾಗಿದ್ದರು ಮತ್ತು ಅವರು ಕೆಟ್ಟ ಪರಿಸ್ಥಿತಿಯಲ್ಲಿ, ಹೆಚ್ಚು ಅವಧಿಗೆ ಕೆಲಸ ಮಾಡಬೇಕಾಗಿತ್ತು. ಈ ತೋಟಗಳಲ್ಲಿ ಅವರ ಪರಿಸ್ಥಿತಿಯು ಗುಲಾಮಿಕೆಗೆ ಹತ್ತಿರವಾಗಿತ್ತು. ಜನರು ಬಡತನ, ಹಸಿವಿನ ಅಂಚಿನಲ್ಲಿ ಬದುಕಿದರು ಎಂಬ ಮಾತಿಗೆ ಭಿನ್ನಮತವಿಲ್ಲ. ಅರವತ್ತು ವರ್ಷಗಳ ಹಿಂದೆ ತೋಟದ ಕೆಲಸಗಾರರಿಗೆ ಸಿಕ್ಕುತ್ತಿದ್ದ ಕೂಲಿ ಗಂಡಾಳಿಗೆ ದಿವಸಕ್ಕೆ ಒಂದು ರೂಪಾಯಿ, ಹೆಣ್ಣಾಳಿಗೆ ಒಂಬತ್ತಾಣೆ, ಸಣ್ಣವರಿಗೆ ಆರಾಣೆ ಇತ್ತು. ಕಾಫಿ ತೋಟದ ಕಾರ್ಮಿಕರ ದುಡಿಮೆಗೆ ಹೊತ್ತುಗೊತ್ತೆಂಬುವುದು ಇರಲಿಲ್ಲ. ಮನಸ್ಸು ಬಂದಷ್ಟು ಕೂಲಿಯನ್ನು ಕೊಟ್ಟು, ದುಡಿಮೆಗಾರರಿಂದ ಹೀನಾಯವಾಗಿ ದುಡಿಸಿಕೊಳ್ಳುತ್ತಿದ್ದರು. ಬಡತನ ರೇಖೆಗಿಂತಲೂ ಕೆಳಮಟ್ಟದಲ್ಲಿ ಬದುಕುತ್ತಿದ್ದರು. ಬಹುತೇಕ ಕಾರ್ಮಿಕರು ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದರು. ಇವರು ಕಡಿಮೆ ಸಂಬಳ, ದೀರ್ಘ ದುಡಿಮೆಯ ಅವಧಿ, ಉದ್ಯೋಗದಲ್ಲಿ ಅಭದ್ರತೆ, ಅತ್ಯಧಿಕ ಶೋಷಣೆಗೆ ಒಳಗಾಗುತ್ತ ತಮ್ಮ ಬದುಕು ನಡೆಸಿದ್ದಾರೆ. ಇಂದಿಗೂ ಕೂಡ ಭೂಮಾಲೀಕರು ಕನಿಷ್ಠ ವೇತನದ ಪ್ರಕಾರ ಕೂಲಿಯನ್ನು ನೀಡದೆ ಕಡಿಮೆ ಕೂಲಿ ನೀಡಲಾಗುತ್ತಿದೆ. ಜೊತೆಗೆ ದುಡಿಯುವ ಅವಧಿ 8 ಗಂಟೆ ಎಂದು ನಿಗದಿಯಾಗಿದ್ದರೂ ಕೂಡ ಹೆಚ್ಚು ಅವಧಿ ಕಾರ್ಮಿಕರಿಂದ ದುಡಿಸಿಕೊಳ್ಳಲಾಗುತ್ತಿದೆ. ಪುರುಷ ರಂತೆ ಮಹಿಳೆಯರು ಸರಿಸಮಾನವಾಗಿ ದುಡಿದರು ಕೂಡ ಮಹಿಳೆಯರಿಗೆ ಕಡಿಮೆ ಕೂಲಿ, ಪುರುಷರಿಗೆ ಹೆಚ್ಚು ಕೂಲಿ ಕೊಡುವುದರ ಮೂಲಕ ವೇತನದಲ್ಲಿ ತಾರತಮ್ಯ ಮಾಡಲಾಗುತ್ತಿದೆ. ಇಂದು ಕೂಡ

ಭೂಮಾಲೀಕರು ಕೊಡುವ ಕಡಿಮೆ ಕೂಲಿ, ಹೆಚ್ಚು ಅವಧಿಗೆ ಅನಿವಾರ್ಯವಾಗಿ ದುಡಿದು ಕಾಫಿ ತೋಟದ ಕಾರ್ಮಿಕರು ತಮ್ಮ ಕಷ್ಟದ ಬದುಕನ್ನು ನಡೆಸುತ್ತಿದ್ದಾರೆ. ಆದರೆ ಹಿಂದಿಗಿಂತ, ಇಂದು ಹೆಚ್ಚಿಗೆ ಕೂಲಿ ಸಿಗುತ್ತಿದೆ ಎಂದು ಹೇಳಬಹುದು.

**ಕೆಲಸದ ಕಠಿಣ ಪರಿಸ್ಥಿತಿ**

ಹಿಂದೆ ಕಾಫಿ ತೋಟದ ಭೂಮಾಲೀಕ, ರೈಟರ್ ಮತ್ತು ಮೇಸ್ತ್ರಿಗಳು ತೋಟಕ್ಕೆ ಬರುವಾಗ ಚಾಟಿ ಹಿಡಿದೇ ಬರುತ್ತಿದ್ದರು. ಅವರು ಹೇಳಿದಷ್ಟು ಕೆಲಸ ಮಾಡದಿದ್ದರೆ ಸಂಜೆಯಾದರೂ ಕಾರ್ಮಿಕರನ್ನು ಬಿಡದೆ ತೋಟದಲ್ಲಿ ಗ್ಯಾಸ್‌ಲೈಟ್ ಇಟ್ಟು ಕೆಲಸ ಮಾಡಿಸುವಂತಹ ಧಣಿಗಳಿದ್ದರು. ಸಣ್ಣ ಪುಟ್ಟ ಕಾರಣಗಳಿಗೆಲ್ಲಾ ಕೆಲಸಗಾರರನ್ನು ಹೊಡೆಯುತ್ತಿದ್ದರು. ಅನಿವಾರ್ಯವಾಗಿ ಕಾಡು ಪ್ರಾಣಿಗಳಾದ ಹುಲಿ, ಚಿರತೆ, ಮತ್ತು ಹಾವುಗಳ ಹಾವಳಿಯಿದ್ದರೂ ಅವುಗಳನ್ನು ಸಹಿಸಿಕೊಂಡು ಪ್ಲಾಂಟರನ ನಿರ್ದೇಶನದಂತೆ ಕೆಲಸವನ್ನು ಮಾಡಬೇಕಿತ್ತು. ಇಂದು ಭೂಮಾಲೀಕರ ದರ್ಪ, ದಬ್ಬಾಳಿಕೆ ಹಿಂದೆ ಇದ್ದಂತೆ ಇಲ್ಲ. ಆದರೆ ಕೆಲಸ ಮಾಡುವುದು ತುಂಬಾ ಕಠಿಣವಾಗಿದೆ.

**ಸಾಲ**

ಹಿಂದಿನ ಕಾಲಘಟ್ಟದಲ್ಲಿ ಮಾಲೀಕ ಮತ್ತು ಕಾರ್ಮಿಕರ ಸಂಬಂಧಗಳನ್ನು ನಿರ್ಧರಿಸುತ್ತಿದ್ದ ಮುಖ್ಯ ಅಂಶವೆಂದರೆ ಅದು ಸಾಲವಾಗಿತ್ತು. ಕಾರ್ಮಿಕರು ವಿವಿಧ ಕಾರಣಗಳಿಗೆ ಪಡೆಯುತ್ತಿದ್ದರು. ಒಮ್ಮೆ ಸಾಲ ಮಾಡಿದವನ ಸಾಲ ಮುಗಿಯುವುದು ಬಹಳ ಅಪರೂಪದ ವಿಷಯವಾಗಿತ್ತು. ಒಂದು ವೇಳೆ ಕೂಲಿ ಕಾರ್ಮಿಕನೊಬ್ಬ ತಾನು ಕೆಲಸ ಮಾಡುತ್ತಿದ್ದವನಿಂದ ಬಿಡುಗಡೆ ಪಡೆದು ಬೇರೆಡೆಗೆ ಹೋಗಬೇಕಾದರೆ ಸಾಲ ಬಾಕಿಯನ್ನು ತೀರಿಸಬೇಕಾಗುತ್ತಿತ್ತು. ಆತನಿಗೆ ಮಾಲೀಕ ಒಂದು ಬಾಕಿ ಚೀಟಿಯನ್ನು ಕೊಡುತ್ತಿದ್ದ. ಅದರಲ್ಲಿ ಸಾಲ ಕೊಟ್ಟ ಮಾಲೀಕನ ವಿಳಾಸ ಮತ್ತು ಕಾರ್ಮಿಕನಿಂದ ಬರಬೇಕಾದ ಬಾಕಿಯ ಲೆಕ್ಕ ಇರುತ್ತಿತ್ತು. ಕೆಲಸಗಾರ ಅದನ್ನು ಹಿಡಿದುಕೊಂಡು ಬೇರೆ ಬೇರೆ ತೋಟಗಳಿಗೆ ಸುತ್ತಿ ಈ ಬಾಕಿ ಹಣವನ್ನು ಕಟ್ಟಿ ತನ್ನನ್ನು ಕೆಲಸಕ್ಕೆ ನೇಮಿಸಿಕೊಳ್ಳುವವರನ್ನು ಹುಡುಕಬೇಕಿತ್ತು. ಅಥವಾ ಕೆಲವು ಸಲ ಮೊದಲೇ ಬೇರೆ ಧಣಿಯನ್ನು ಹುಡುಕಿ ಈ ವಿಚಾರ ನಿರ್ಧಾರವಾಗಿರುತ್ತಿತ್ತು. ನಂತರ ಸಾಲದ ಹಣವನ್ನು ಮೊದಲಿನ ಮಾಲೀಕನಿಗೆ ನೇರವಾಗಿ ಹೊಸ ಮಾಲೀಕ ಕಟ್ಟಿ ಕೆಲಸಗಾರರನ್ನು ಬಿಡಿಸಿಕೊಂಡು ತನ್ನಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುತ್ತಿದ್ದ. ಇದು ಮುಂದೆ ಹಾಗೇ ಮುಂದುವರೆಯುತ್ತಿತ್ತು ಇಷ್ಟು ಮಾತ್ರವಲ್ಲ, ಕೆಲಸಗಾರರರು ಸಾಲ ತೀರಿಸಲಾರದೆ ಕದ್ದು ಓಡುವ ಪರಿಸ್ಥಿತಿಯೂ ಕೂಡ ಇತ್ತು. ಆದರೆ ಹಾಗೆ ಓಡಿದವನು ಹತ್ತಿರದಲ್ಲೆಲ್ಲೂ ಕೆಲಸ ಮಾಡುವುದು ಕಷ್ಟವಾಗುತ್ತಿತ್ತು. ಸಾಮಾನ್ಯವಾಗಿ ಹೊಸಬರನ್ನು ಕೆಲಸಕ್ಕೆ ತೆಗೆದುಕೊಳ್ಳುವಾಗ ಪ್ರತಿಯೊಬ್ಬರೂ ಸಾಲ ಇಲ್ಲದಿದ್ದರೂ ಮೊದಲಿನ ಮಾಲೀಕನಿಂದ ಯಾವುದೇ ಬಾಕಿ ಇಲ್ಲ ಎಂಬ ಪತ್ರವನ್ನು ಬರೆಸಿಕೊಂಡು ತರಬೇಕಾಗುತ್ತಿತ್ತು. ಕೆಲವು ಸಲ ದೂರ ದೂರದ ಊರುಗಳಲ್ಲಿ ಕೆಲವರು ಮಾಲೀಕರು ತಾವು ಸಾಲ ಕೊಡಬೇಕಾಗುವುದಿಲ್ಲ ಎಂದು ಇಂತವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಿತ್ತು. ಆಗೆಲ್ಲ ತಮ್ಮನ್ನು ಪತ್ತೆ ಮಾಡಬಾರದೆಂದು ಕೆಲಸಗಾರರು ಹೊಸ ಹೆಸರನ್ನು ಇಟ್ಟುಕೊಳ್ಳುತ್ತಿದ್ದರು ಜೊತೆಗೆ, ಇಂತವರನ್ನು ತಪ್ಪಿಸಿಕೊಂಡವರೆಂದು ಪತ್ರಿಕೆಗಳಲ್ಲಿ ಜಾಹೀರಾತು ನೀಡುವ ಪದ್ಧತಿ ಸ್ವಾತಂತ್ರ್ಯ ಪೂರ್ವದಲ್ಲಿ ಅನೇಕ ಕಡೆಗಳಲ್ಲಿ ಜಾರಿಯಲ್ಲಿತ್ತು ಪತ್ತೆಯಾದ ಕೆಲಸಗಾರರನ್ನು ಹಳೆಯ ಮಾಲೀಕ ಪೋಲಿಸರ ಇಲ್ಲವೇ ತಮ್ಮದೇ ಬಲದಿಂದ ವಾಪಸ್ ಕರೆದುಕೊಂಡು ಹೋಗುತ್ತಿದ್ದ. ಸ್ವಾತಂತ್ರ್ಯದ ನಂತರ ಪತ್ರಿಕಾ ಜಾಹೀರಾತು ಇತ್ಯಾದಿಗಳು ನಿಂತು ಹೋಗಿದ್ದರೂ, ಬಾಕಿ ಚೀಟಿ ಪದ್ಧತಿ ಮಾತ್ರ ಬೇರೆ ಬೇರೆ ರೂಪಗಳಲ್ಲಿ ಇತ್ತೀಚಿನವರೆಗೂ ಜಾರಿಯಲ್ಲಿತ್ತು. ಅಷ್ಟೇ ಅಲ್ಲದೇ, ಕಾಫಿ ತೋಟಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ದಾಖಲಾತಿಯನ್ನು

ಪ್ಲಾಂಟರ್‌ಗಳು ಕಾರ್ಮಿಕ ಇಲಾಖೆಗೆ ಕೊಡುತ್ತಿರಲಿಲ್ಲ. ಕೆಲವು ವರ್ಷಗಳ ಹಿಂದೆ ಕಾರ್ಮಿಕರು ವರ್ಷಗಟ್ಟಲೆ ಒಂದೇ ತೋಟದಲ್ಲಿ ಅಥವಾ ಒಬ್ಬನೇ ಪ್ಲಾಂಟರ್ ಮನೆಯಲ್ಲಿ ಕೆಲಸ ಮಾಡುತ್ತಿದ್ದರು. ಈಗ ಆ ಪರಿಸ್ಥಿತಿ ಬದಲಾಗಿದೆ. ಕಾರ್ಮಿಕರು ತಮಗೆ ಎಲ್ಲಿ ಅನುಕೂಲವೊ ಅಲ್ಲಿ ಕೆಲಸ ಮಾಡಲು ಹೋಗುತ್ತಾರೆ. ವರ್ಷಗಟ್ಟಲೆ ಒಬ್ಬನೇ ಪ್ಲಾಂಟರ್ ಮನೆಯಲ್ಲಿ ಕೆಲಸ ಮಾಡುತ್ತಿದ್ದಾಗ, ಕಾರ್ಮಿಕರನ್ನು ಪ್ಲಾಂಟರ್‌ಗಳು ಅತ್ಯಂತ ಹೀನಾಯವಾಗಿ ನಡೆಸಿಕೊಳ್ಳುತ್ತಿದ್ದರು. ಕಾರ್ಮಿಕರ ಕಷ್ಟ, ಮದುವೆ ಮುಂತಾದವುಗಳಿಗೆ ಸಾಲ ಕೊಟ್ಟು, ಒಂದಕ್ಕೆ ಹತ್ತು ಬರೆದು, ಹತ್ತಾರು ವರ್ಷ ದುಡಿದರೂ ಸಾಲ ತೀರಿಲ್ಲ ಎಂದು ತಲೆಮಾರುಗಳವರೆಗೆ ದುಡಿಸಿಕೊಳ್ಳುತ್ತಿದ್ದರು. ಕೆಲವು ವರ್ಷಗಳ ಹಿಂದೆ ಕಾರ್ಮಿಕರು ತಮ್ಮ ಊರಿನಲ್ಲಿ ಮಾತ್ರವೇ ಕೂಲಿ ಕೆಲಸ ಮಾಡುತ್ತಿದ್ದರು. ತಮ್ಮ ಕಷ್ಟ ಸುಖಗಳಿಗಾಗಿ ಮಾಲೀಕರಿಂದ ಸಾಲ ಮಾಡುತ್ತಿದ್ದರು. ಆ ಸಾಲವನ್ನು ತೀರಿಸುವ ಸಲುವಾಗಿ ಅದೇ ಊರಿನಲ್ಲಿ ಕೆಲಸ ಮಾಡುತ್ತಿದ್ದರು. ಮುಖ್ಯವಾಗಿ ಕಾರ್ಮಿಕರು ತಮ್ಮ ಮದುವೆಗಾಗಿ ಸಾಲ ಮಾಡುತ್ತಿದ್ದರು. ಆ ಸಾಲ ಮಕ್ಕಳು, ಮೊಮ್ಮಕ್ಕಳು ಮದುವೆಗೆ ಬಂದರೂ ಆ ಸಾಲವನ್ನು ತೀರಿಸಲಾಗುತ್ತಿಲ್ಲ. ನಂತರ ಇತ್ತೀಚಿನ ವರ್ಷಗಳಲ್ಲಿ ಸಂಪೂರ್ಣವಾಗಿ ಅಲ್ಲದಿದ್ದರೂ ಬಹಳಷ್ಟು ಬದಲಾವಣೆಗಳಾಗಿವೆ. ಒಂದು ಕಾಲದಲ್ಲಿ ತಾವು ಹುಟ್ಟಿದ ಊರಲ್ಲೆ, ಭೂಮಾಲೀಕರ ಮನೆಯಲ್ಲೆ ಅಘೋಷಿತ ಒಪ್ಪಂದದ ರೀತಿಯಲ್ಲಿ ಕಾರ್ಮಿಕರು ಕೆಲಸ ಮಾಡಬೇಕಿತ್ತು. ಆಗ ಕಾರ್ಮಿಕರ ಮೇಲೆ ಭೂಮಾಲೀಕರ ನೇರ ಹಿಡಿತ, ನೇರ ದಬ್ಬಾಳಿಕೆ ಇವೆಲ್ಲ ಇರುತ್ತಿದ್ದವು. ಸಾಲಗಾರ ಆಳು ಆಗಿರುವುದರಿಂದ ತನ್ನ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಕೇಳಲಾಗುತ್ತಿರಲಿಲ್ಲ. ಮಾಲೀಕರು ಕೊಡುವ ಕಡಿಮೆ ಕೂಲಿಗೆ ತೃಪ್ತನಾಗಿರಬೇಕಿತ್ತು. ಇದರಿಂದ ಅವನು ಮತ್ತೆ ಮತ್ತೆ ಸಾಲ ಪಡೆದುಕೊಳ್ಳುತ್ತ ನಿರಂತರ ಸಾಲಗಾರನಾಗುತ್ತಿದ್ದನು. ಆದರೆ ಇಂದು ಭೂಮಾಲೀಕರಿಂದ ಕಾರ್ಮಿಕರು ಸಾಲ ಮಾಡುವುದು ಕಡಿಮೆಯಾಗಿದೆ. ಸ್ತ್ರೀಶಕ್ತಿ ಸಂಘಗಳು ಮತ್ತು ಧರ್ಮಸ್ಥಳ ಸ್ವಸಹಾಯ ಸಂಘಗಳು, ಗ್ರಾಮೀಣ ಕೂಟ ಸಂಘಗಳು ಕಾರ್ಮಿಕರಿಗೆ ಬಡ್ಡಿಸಹಿತ ಸಾಲವನ್ನು ನೀಡಲಾಗುತ್ತಿದೆ. ಇದರಿಂದ ಕಾರ್ಮಿಕರು, ಭೂಮಾಲೀಕರ ನೇರ ಹಿಡಿತದಲ್ಲಿ ಇರುವಂತಹ ಪರಿಸ್ಥಿತಿ ಬಹುತೇಕ ಕಡಿಮೆವಾಗಿದೆ. ಆದರೆ ಇಂದು ಸಂಘ–ಸಂಸ್ಥೆಗಳಲ್ಲಿ ಹೆಚ್ಚಾಗಿ ಸಾಲ ಮಾಡಿರುವುದರಿಂದ ಕಡ್ಡಾಯವಾಗಿ ವಾರಕ್ಕೆ ಸಾಲ ಕಟ್ಟಬೇಕಾಗಿರುವುದರಿಂದ ಸಂಬಂಧಿಕರ ಮನೆಯಲ್ಲಿ ಕೆಲವು ದಿನಗಳು ಉಳಿಯಲು ಸಾಧ್ಯವಾಗದಿರುವ ಪರಿಸ್ಥಿತಿ ಇದೆ. ಒಟ್ಟಾರೆಯಾಗಿ ಅಂದು ಮತ್ತು ಇಂದು ಕಾಫಿ ತೋಟದ ಕಾರ್ಮಿಕರು ಸಾಲಕ್ಕೆ ಸಿಕ್ಕಿ ಸಂಕಷ್ಟದ ಬದುಕನ್ನು ನಡೆಸುತ್ತಿದ್ದಾರೆ.

**ಭೂಮಿ ಮತ್ತು ಆದಾಯ**

ಮೊದಲು ಭೂಒಡೆಯನ ಕೈಕೆಳಗೆ ಕೆಲಸ ಮಾಡಿ ಆ ಭೂಮಿಯ ಫಲವನ್ನು ಭೂ ಒಡೆಯನಿಗೆ ಕೊಟ್ಟು ಆತ ಕೊಟ್ಟ ಸ್ವಲ್ಪ ಆಹಾರವನ್ನು ಸೇವಿಸಿ ಜೀವನ ಮಾಡುವಂತಹ ಪರಿಸ್ಥಿತಿ ಇತ್ತು. ಭೂಮಿಯ ಅಸಮಾನ ಹಂಚಿಕೆಯು ಭಾರೀ ಭೂಮಾಲೀಕರು ಮತ್ತು ಕಾರ್ಮಿಕರ ನಡುವೆ ಅಗಾಧ ವ್ಯತ್ಯಾಸವು ಎರಡು ತದ್ವಿರುದ್ಧ ವರ್ಗಗಳನ್ನೇ ನಿರ್ಮಾಣ ಮಾಡಿದೆ. ಹೆಚ್ಚು ಭೂಮಿಯನ್ನು ಹೊಂದಿರುವ ಭಾರೀ ಭೂಮಾಲೀಕರ ದಬ್ಬಾಳಿಕೆ ಹಾಗೂ ಯಜಮಾನಿಕೆ ಹೆಚ್ಚಾಗಿತ್ತು. ಸರ್ಕಾರಿ, ಕಂದಾಯ, ಫಾರೆಸ್ಟ್, ಸೆಮಿ ಫಾರೆಸ್ಟ್, ಗೋಮಾಳ ಇತ್ಯಾದಿ ಎಲ್ಲಾ ಭೂಮಿಯು ಭೂಮಾಲೀಕರ ಪಾಲಾದವು. ಕಾರ್ಮಿಕರು ಮಾತ್ರ ಭೂಮಿಯನ್ನು ಹೊಂದದೇ ಭೂಮಾಲೀಕರ ಆಳುಗಳಾಗಿ ದುಡಿಯುತ್ತಿದ್ದರು. ಕಡಿಮೆ ಸಂಖ್ಯೆಯ ಭೂಮಾಲೀಕರು ತಮಗಿಂತ ಕೆಳಗಿರುವ ಭೂರಹಿತ ಕಾರ್ಮಿಕರನ್ನು ಶೋಷಣೆ ಮಾಡುತ್ತಿದ್ದರು. ಭೂಮಾಲೀಕರು ಕಾರ್ಮಿಕರನ್ನು ತಮ್ಮ ಹಿಡಿತದಲ್ಲಿರಿಸಿಕೊಂಡಿದ್ದರು. ಕಾರ್ಮಿಕರು ಹಲವಾರು ಶತಮಾನಗಳಿಂದಲೂ ಕಷ್ಟಪಟ್ಟು

ದುಡಿಯುತ್ತಿದ್ದರೂ, ತಮ್ಮದೇ ಆದ ಉತ್ತಮ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗಿಲ್ಲ. ಕಾರ್ಮಿಕರು ಹಿಂದೆ ಹೀಗೆ ಭೂರಹಿತರು ಆಗಿದ್ದರು ಅದೇ ರೀತಿ ಇಂದಿಗೂ ಕೂಡ ಕಾರ್ಮಿಕರು ಅತ್ಯಧಿಕವಾಗಿ ಭೂರಹಿತರಾಗಿದ್ದಾರೆ ಮತ್ತು ಅಲ್ಪ ಪ್ರಮಾಣದಲ್ಲಿ ಭೂಮಿಯನ್ನು ಹೊಂದಿರುವವರು ಇದ್ದಾರೆ. ಭೂಮಿ ಇಲ್ಲದ ಕಾಫಿ ತೋಟದ ದುಡಿಮೆಗಾರರು ಸದಾಕಾಲ ಭೂಮಾಲೀಕರ ಕಾಫಿ ತೋಟಗಳಲ್ಲಿ ಕೂಲಿಕಾರರಾಗಿ ದುಡಿಯುತ್ತ ಮತ್ತು ಅಲ್ಪ-ಸ್ವಲ್ಪ ಭೂಮಿ ಹೊಂದಿರುವವರು, ತಮ್ಮ ಭೂಮಿಯಿಂದ ಬರುವ ಆದಾಯವು ಕುಟುಂಬ ನಿರ್ವಹಿಸಲು ಸಾಕಾಗದೆ ಇರುವುದರಿಂದ ಭೂಮಾಲೀಕರ ಜಮೀನಿನಲ್ಲಿ ದುಡಿದು ಬದುಕು ಸಾಗಿಸಬೇಕಾಗಿರುವುದು ಅನಿವಾರ್ಯತೆ ಇದೆ. ಆದ್ದರಿಂದ ಕಾಫಿ ತೋಟದ ದುಡಿಮೆಗಾರರು ಅಂದು ಮತ್ತು ಇಂದು ಅತ್ಯಧಿಕ ಪ್ರಮಾಣದಲ್ಲಿ ಭೂರಹಿತರಾಗಿದ್ದು ಆರ್ಥಿಕವಾಗಿ ಅತ್ಯಂತ ಹಿಂದುಳಿದವರಾಗಿದ್ದಾರೆ.

**ಕಾರ್ಮಿಕ ಕಾಯ್ದೆಗಳು**

ಹಿಂದೆ ಕಾಫಿ ತೋಟದ ದುಡಿಮೆಗಾರರಿಗೆ ಕಾರ್ಮಿಕ ಕಾಯ್ದೆಗಳಡಿ ದೊರೆಯುತ್ತಿದ್ದ ಯಾವುದೇ ಸೌಲಭ್ಯಗಳು ಸಿಗುತ್ತಿರಲಿಲ್ಲ. ಉದ್ಯೋಗದ ಸೇವಾ ಷರತ್ತುಗಳು ಅಷ್ಟಾಗಿ ಮಹತ್ವ ಪಡೆಯದೇ ಮಾಲೀಕರ ನಿಯಂತ್ರಣಕ್ಕೊಳಪಟ್ಟಿತ್ತು. ಆ ದಿನಗಳಲ್ಲಿ ಕಾರ್ಮಿಕರ ರಕ್ಷಣೆ ಮತ್ತು ಅವರ ಹಕ್ಕುಗಳನ್ನು ಕಾಪಾಡುವ ಯಾವುದೇ ಕಾರ್ಮಿಕ ಕಾನೂನುಗಳು ರಚನೆಯಾಗಿರಲಿಲ್ಲ ಹಾಗೂ ಕಾರ್ಮಿಕರಿಗೂ ಸಹ ಅವರ ಹಕ್ಕಿನ ಬಗ್ಗೆ ಅರಿವಿಲ್ಲದಿದ್ದರಿಂದ ಮಾಲೀಕರಿಂದ ಶೋಷಣೆಗೆ ಒಳಗಾಗುತ್ತಿದ್ದರು. ಬೋನಸ್, ಗ್ರಾಚುಟಿ, ಕನಿಷ್ಠ ಕೂಲಿ ಮೊದಲಾದ ಯಾವ ಸೌಲಭ್ಯಗಳೂ ತೋಟ ಕಾರ್ಮಿಕರಿಗೆ ಸಿಗುತ್ತಿರಲಿಲ್ಲ. ಕಾರ್ಮಿಕರ ಮಕ್ಕಳಿಗೆ ಓದು-ಬರಹ ಕಲಿಯುವ ಅವಕಾಶವಿರಲಿಲ್ಲ. ತೋಟಗಾರರ ಕಾರ್ಮಿಕ ಕಾಯ್ದೆ ಜಾರಿಗೆ ಬಂದ ನಂತರ ಕನಿಷ್ಠ ವೇತನ ನಿಗದಿಯಾಗಿದ್ದು, ಕಾರ್ಮಿಕರಿಗೆ ಸಿಗಬಹುದಾದ ಸೌಲಭ್ಯಗಳು ಪೂರ್ಣಪ್ರಮಾಣದಲ್ಲಿ ಸಿಗದಿದ್ದರೂ ಅಲ್ಪ ಪ್ರಮಾಣದಲ್ಲಿ ಸಿಗುತ್ತಿದೆ. ಈ ಸೌಲಭ್ಯಗಳ ಅಲ್ಪ ಪ್ರಮಾಣದ ಕಾರ್ಮಿಕರಿಗೆ ದೊರೆಯುತ್ತಿದ್ದು, ಅಧಿಕ ಪ್ರಮಾಣದ ಕಾಫಿ ತೋಟದ ಕಾರ್ಮಿಕರು ಕಾರ್ಮಿಕ ಕಾಯ್ದೆಗೆ ಒಳಪಡದೆ, ಎಲ್ಲಾ ಸೌಲಭ್ಯಗಳಿಂದ ವಂಚಿತರಾಗುತ್ತ, ಸಂಕಷ್ಟದ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆ.

**ವಲಸೆ ಮತ್ತು ಕಂಗಾಣಿ ಪದ್ಧತಿ**

ಸ್ಥಳೀಯರನ್ನು ಕೆಲಸಕ್ಕೆ ಸೇರಿಸಿಕೊಂಡರೆ ವಿಪರೀತ ಶೋಷಣೆ ಮಾಡಲು ಸಾಧ್ಯವಾಗುವುದಿಲ್ಲ ಎಂಬ ಮುಖ್ಯ ಉದ್ದೇಶದಿಂದ ಬ್ರಿಟಿಷರು ಮತ್ತು ನಂತರದ ಕಾಲಘಟ್ಟಗಳಲ್ಲಿ ತೋಟಗಳನ್ನು ಅಭಿವೃದ್ಧಿಪಡಿಸಲು ಮಾಲೀಕರು ಜನರನ್ನು ಬೇರೆ ಕಡೆಗಳಿಂದ ಕರೆತರುತ್ತಿದ್ದರು. ಬೇರೆಡೆಗಳಿಂದ ಕರೆತಂದ ಕಾರ್ಮಿಕರನ್ನು ಜೀತದಾಳುಗಳಂತೆ ಯಾವುದೇ ಕೂಲಿ ನೀಡದೆ ಬದುಕಲು ಅಗತ್ಯವಿರುವಷ್ಟು ಆಹಾರ ನೀಡುತ್ತಾ ಕೆಲಸ ಮಾಡಿಸಿಕೊಳ್ಳುತ್ತಿದ್ದರು. ಇಂಗ್ಲೆಂಡಿನ ಗಿರಣಿಗಳಲ್ಲಿ ಇದ್ದಂತೆ ದಕ್ಷಿಣ ಇಂಡಿಯಾದ ಕಾಪಿ ತೋಟಗಳಲ್ಲಿ 'ಕಂಗಾಣಿ' ಪದ್ಧತಿ ಅನುಷ್ಠಾನದಲ್ಲಿತ್ತು, ಬಹುತೇಕ ತೋಟಗಾರರು ತಮಗೆ ಬೇಕಾದ ಆಳುಗಳನ್ನು ಈ ಕಂಗಾಣಿಗಳ ಅಂದರೆ ಮೇಸ್ತ್ರಿಗಳ ಅಥವಾ ದಲ್ಲಾಳಿಗಳ ಮೂಲಕ ತೆಗೆದುಕೊಳ್ಳುತ್ತಿದ್ದರು. ಈ ಪದ್ಧತಿಯಿಂದ ತೋಟದವನಿಗೂ ಆಳುಗಳಿಗೂ ಸಂಬಂಧವೇ ಇರುತ್ತಿರಲಿಲ್ಲ. ಆಳುಗಳನ್ನು ತರುವ, ಅವರನ್ನು ಹೇಗೆಂದರೆ ಹಾಗೆ ನಡೆಸಿಕೊಳ್ಳುವ ಕೆಲಸ ಕಂಗಾಣಿಯದು. ಈ ಪದ್ಧತಿಗೆ ತುಂಬಾ ಆಕ್ಷೇಪಣೆ ಬಂದಿತು. ಇದನ್ನು ತಪ್ಪಿಸಲು ಇಂಡಿಯಾ ಸರ್ಕಾರ 1951ರಲ್ಲಿ ಕೆಲವು ನಿಯಮಗಳನ್ನು ಜಾರಿಗೆ ತಂದಿತು. ಕಂಗಾಣೀ ಪದ್ಧತಿಯನ್ನು ತಪ್ಪಿಸುವ ಕೆಲಸ 1951ರಲ್ಲಿ ಆರಂಭವಾಗಿ 1958ರಲ್ಲಿ ಪೂರ್ಣಗೊಂಡಿತು. ತೋಟಗಾರರು ತಮಗೆ ಬೇಕಾದ ಕಾರ್ಮಿಕರನ್ನು ನೇರವಾಗಿ ನೇಮಿಸಿಕೊಳ್ಳುವ ಪದ್ಧತಿ ಬಂತು. ಇಂದಿಗೂ ಕೂಡ ವಲಸೆ ಎಂಬುವುದು ಮತ್ತು

ಕಂಗಾಣಿ ಪದ್ಧತಿಗಳು ಇದ್ದು, ಕಾಫಿ ತೋಟದ ಕಾರ್ಮಿಕರು ತನ್ನ ಬದುಕನ್ನು ನಡೆಸಲು ವಲಸೆ ಹೋಗಿ ಅವ್ಯವಸ್ಥೆಯ ವಾತಾವರಣದಲ್ಲಿ ಕಷ್ಟಪಟ್ಟು ದುಡಿಯಬೇಕಾಗಿದೆ. ಒಟ್ಟಿನಲ್ಲಿ ಕಾಫಿ ತೋಟದ ದುಡಿಮೆಗಾರರ ಬದುಕಿನ ಸ್ಥಿತಿ ಅಂದು ಮತ್ತು ಇಂದು ಶೋಚನೀಯವಾಗಿದೆ ಎಂದು ಹೇಳಬಹುದು.

**ಉಪಸಂಹಾರ**

ಒಟ್ಟಾರೆಯಾಗಿ ಹೇಳಬೇಕೆಂದರೆ, ಬ್ರಿಟಿಷ್ ಮಾಲೀಕತ್ವದಲ್ಲಿದ್ದ ಕಾಲಘಟ್ಟದಲ್ಲಿ ಕಾಫಿ ತೋಟದಲ್ಲಿ ದುಡಿಮೆ ಮಾಡಿರುವ ದುಡಿಮೆಗಾರರು ಹಿಂದೆ ಅತೀಯಾದ ಶೋಷಣೆಗೆ, ದಬ್ಬಾಳಿಕೆಗೆ ಒಳಗಾಗಿದ್ದಾರೆ. ಕಾರ್ಮಿಕರು ಅತೀ ಕಡಿಮೆ ಕೂಲಿಗೆ, ಅತ್ಯಧಿಕ ಸಮಯ ದುಡಿದಿದ್ದಾರೆ. ಇದರೊಂದಿಗೆ ಯಾವುದೇ ಸೌಲಭ್ಯಗಳನ್ನು ಪಡೆಯದೆ, ಎಲ್ಲಾ ರೀತಿಯ ಸೌಲಭ್ಯಗಳಿಂದ ವಂಚಿತರಾಗಿ ಮತ್ತು ಸಾಲದ ಶೂಲಕ್ಕೆ ಸಿಕ್ಕಿ ಹೀನಾಯವಾದ ಬದುಕನ್ನು ನಡೆಸುತ್ತಿದ್ದಾರೆ. ಹಿಂದಿನ ಪರಿಸ್ಥಿತಿಗೆ ಹೋಲಿಸಿದರೆ ಕಾರ್ಮಿಕರ ಮೇಲಿನ ಶೋಷಣೆ ನಿಯಂತ್ರಣದಲ್ಲಿದ್ದು, ಕೂಲಿಯ ಪ್ರಮಾಣ ಕೂಡ ಸ್ವಲ್ಪ ಅಧಿಕವಾಗಿದೆ. ಕಾಯ್ದೆಗೆ ಒಳಪಟ್ಟವರು ಮಾತ್ರ ಕಾರ್ಮಿಕ ಕಾಯ್ದೆಗಳ ಸೌಲಭ್ಯಗಳನ್ನು ಪಡೆಯುತ್ತಿದ್ದರೆ, ಕಾಯ್ದೆಗೆ ಒಳಪಡದ ಕಾರ್ಮಿಕರು ಎಲ್ಲಾ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಕಾರ್ಮಿಕರು ಹಿಂದೆ ಭೂಮಾಲೀಕರಿಂದ ಅಧಿಕವಾಗಿ ಸಾಲ ಪಡೆಯುತ್ತಿದ್ದರು, ಆದರೆ ಇಂದು ಭೂಮಾಲೀಕರಿಂದ ಅಲ್ಪ ಪ್ರಮಾಣದಲ್ಲಿ ಸಾಲ ಮಾಡಿಕೊಂಡಿದ್ದು, ಸ್ತ್ರೀಶಕ್ತಿ, ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘ, ಸ್ವಸಹಾಯ ಸಂಘ, ಗ್ರಾಮೀಣ ಕೂಟ ಸಂಘ ಹಾಗೂ ಇತರ ಕಿರುಹಣಕಾಸು ಸಂಸ್ಥೆಗಳಿಂದ ಸಾಲ ಪಡೆದುಕೊಳ್ಳುತ್ತಿದ್ದಾರೆ. ಕಾರ್ಮಿಕರು ಭೂಮಿಯಿಂದ ಹಿಂದಿನಿಂದಲೂ ವಂಚಿತರಾಗಿದ್ದಾರೆ. ಒಟ್ಟಿನಲ್ಲಿ ಕಾಫಿ ತೋಟದ ದುಡಿಮೆಗಾರರ ಬದುಕು ಮೊದಲಿಗೆ ಹೋಲಿಸಿದರೆ ಸುಧಾರಿಸಿದೆ ಎನಿಸಿದರೂ ಇಂದಿಗೂ ಕೂಡ ಸಂಕಷ್ಟದಲ್ಲೇ ಬದುಕು ಸಾಗಿಸುತ್ತಿರುವುದನ್ನು ಕಾಣಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


- ಹರ್ಷಕುಮಾರ್ ಕುಗ್ವೆ. (2019). *ಕಾಫಿ ದಣಿ ಸಿದ್ದಾರ್ಥ ಮಾಲೀಕತ್ವದ ಕಾಫಿ ತೋಟಗಳ ಕಾರ್ಮಿಕರ ಪರಿಸ್ಥಿತಿ ಹೇಗಿದೆ ಗೊತ್ತೆ?.* ಟ್ರೂಥ್ ಇಂಡಿಯಾ ಕನ್ನಡ ವರದಿ.
- ನವೀನ್‌ಕುಮಾರ್ ಎಚ್.ಆರ್. (2016). ಬೆಟ್ಟದಿಂದ ಬಟ್ಟಲಿಗೆ ಕಾಫಿ–ಟೀ ತರುವ ಕಾರ್ಮಿಕರ ಯೂನಿಯನಿನ 60 ವರ್ಷಗಳ ರೋಚಕ ಇತಿಹಾಸ. *ಜನಶಕ್ತಿ ಕನ್ನಡ ವಾರ ಪತ್ರಿಕೆ.* 10(23).
- ನಾಗೇಗೌಡ ಎಚ್. ಎಲ್. (1978). *ಬೆಟ್ಟದಿಂದ ಬಟ್ಟಲಿಗೆ ಅಥವಾ ಕಾಫಿಯ ಕಥೆ.* ಸಾಹಿತ್ಯ ಸದನ ಪ್ರಕಾಶನ.
- ಪುಟ್ಟಯ್ಯ ಬಿ.ಎಂ. (2013). ಮಲೆನಾಡು: ಕೂಲಿ ಕಾರ್ಮಿಕರ ಸ್ಥಿತಿಗತಿಗಳು. *ಸಂವಾದ ಮಾಸ ಪತ್ರಿಕೆ.* 11(8).
- ಪುಟ್ಟಯ್ಯ ಬಿ.ಎಂ. (2015). *ಶ್ರಮ ಭಾಷೆ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಪ್ರಸಾದ್ ರಕ್ಷಿದಿ. (2021). ತೋಟದ ಕೂಲಿಗಳ ಕಣ್ಣೀರಿಗೆ ಮಿಡಿದ ಕೆಲ ಜನಪರ ಮಾಲೀಕರಿವರು. *ನಾನು ಗೌರಿ ಪತ್ರಿಕೆ.*
- ರುದ್ರಯ್ಯ ಕೆ.ಎಚ್.(2021). *ಕಾಫಿ ಕಾರ್ಮಿಕರ ಕಡೆಗಣನೆ; ಕನಿಷ್ಠ ವೇತನ, ಸರ್ಕಾರದ ಸೌಲಭ್ಯದಿಂದ ಲಕ್ಷಾಂತರ ಕಾರ್ಮಿಕರು ವಂಚಿತ.* ವಿಜಯ ಕರ್ನಾಟಕ ಪತ್ರಿಕೆ.
- ಶಿವರಾಮ ಕಾರಂತ ಕೆ. (2017). *ಚೋಮನ ದುಡಿ.* ಸಪ್ನ ಬುಕ್ ಹೌಸ್.